ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ಈಗಾಗಲೇ ತಮ್ಮ ಎದುರುಗಡೆ, ಮಾನ್ಯ ಮುಖ್ಯಮಂತ್ರಿಯವರು, ಸಭಾನಾಯಕರು ಮತ್ತು ವಿವಿಧ ಮುಖಂಡರುಗಳನ್ನು ಕರೆಸಿ ಈ ವಿಚಾರದಲ್ಲಿ ಪ್ರಶ್ನೆ ಮಾಡಲಾಗಿದೆ. ಡಾ॥ ಕಾಂತಾರವರ ವಿಚಾರದಲ್ಲಿ ಏನು ಪ್ರಶ್ನೆಯನ್ನು ಎತ್ತಿದ್ದಾರೆ, ಅದರ ಕುರಿತಾಗಿ ಹೇಳುವುದಾದರೆ ಅವರು ಯಾವುದೇ ತರಹದ ತಪ್ಪನ್ನು ಮಾಡಿಲ್ಲ. ಇದರಲ್ಲಿ ಆಗಿರತಕ್ಕಂಥ ನ್ಯೂನತೆಗಳು ಮತ್ತು ಮೋಸ ಮೊದಲಾದಂಥ ವರ್ತನೆಗಳಿಂದ, ಮತ್ತು ವಂಚನೆ ಪ್ರಕರಣಗಳ ಕುರಿತು ಡಾ॥ ಕಾಂತಾರವರೇ ವಿಚಾರದ ಪ್ರಸ್ತಾವನೆ ಮಾಡಿರುವುದರಿಂದ ಅದರ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳತಕ್ಕಂಥಾದ್ದು ಅಲ್ಲ. ಬ್ಯೂರೋ ಆಫ್ ಇನವೆಸ್ಟಿಗೇಷನ್‌ರವರ ರಿಪೋರ್ಟ್‌ನಿಂದ ಸಂಪೂರ್ಣವಾಗಿರತಕ್ಕಂಥ ವಸ್ತುಸ್ಥಿತಿಯನ್ನು ಬಯಲಿಗೆ ತಂದಿದ್ದಾರೆ. ಆದ್ದರಿಂದ ಆ ವಿಚಾರದಲ್ಲಿ ಪ್ರಶ್ನೆ ಇಲ್ಲ. ಆದರೆ ಮಾನ್ಯ ರಾಮದಾಸ್ ಮತ್ತಿತರ ಹಿರಿಯರು ಇತ್ತೀಚೆಗೆ ಸೇರಿಸಿಕೊಂಡ 21 ಜನರ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ, ಆ ಬಗ್ಗೆ ಹೇಳುವುದಾದರೆ, ಆ ಕುರಿತು ನಮ್ಮ ಅಪರ ಮುಖ್ಯ ಕಾರ್ಯದರ್ಶಿಯವರ ಮೂಲಕ ಎನ್‌ಕ್ವೈರಿ ಮಾಡಿಸಿ, ಒಂದು ತಿಂಗಳೊಳಗಾಗಿ ಅದರ ವರದಿಯನ್ನು ತರಿಸಿ ಕೊಳ್ಳುವ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಆದ್ದರಿಂದ ಸನ್ಮಾನ್ಯ ಶಾಸಕರುಗಳೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ನಾನು ಸರಕಾರದ ಪರವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ತಾವುಗಳೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ದಯಮಾಡಿ ಹೋಗಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ॥ ಎಂ. ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ಅವರು ಹೇಳಿರತಕ್ಕಂಥಾದ್ದು ಕ್ಲಿಯರ್ ಅಲ್ಲ. ಯೂನಿವರ್ಸಿಟಿಯವರು ಎಕ್ಸಾಮಿನೇಷನ್ ಕಂಡಕ್ಟ್ ಮಾಡಿದ ಬಗ್ಗೆ ಎನ್‌ಕ್ವೈರಿ ಮಾಡಲು ನಾವು ಒಪ್ಪಿಕೊಂಡಿದ್ದೇವೆ. ಉಳಿದ ವಿಚಾರದ ಬಗ್ಗೆ ನಾನು ಏನು ಉತ್ತರದಲ್ಲಿ ಕೊಟ್ಟಿದ್ದೇನೆ, ಅದಕ್ಕೆ ನಾನು ಬದ್ಧನಾಗಿದ್ದೇನೆ.

ಉಪಾಧ್ಯಕ್ಷರು : ಈಗ ಮಾನ್ಯ ಸಭಾನಾಯಕರು ಸ್ಟೇಟ್‌ಮೆಂಟನ್ನು ಕೊಡುತ್ತಾರೆ.

ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ತೊಗರಿ ಬೆಳೆ ಹಾನಿಯ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡವರಿಗೆ ಹೆಚ್ಚಿನ ಪರಿಹಾರ.

+ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷರೇ, ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ತೊಗರಿ ಬೆಳೆಯ ಹಾನಿಯ ಕಾರಣದಿಂದ ರೈತರು ನಾವನ್ನು ಅಪ್ಪುವವರೆಗೆ ದುಸ್ಥಿಗೆ ಹೋಗಿದ್ದಾರೆ. ಈ ಬಗ್ಗೆ ತತ್‌ಕ್ಷಣ ಏನಾದರೂ ಪರಿಹಾರವನ್ನು ಕೊಡಬೇಕೆಂದು ಮಾನ್ಯ ವಿರೋಧ ಪಕ್ಷದವರು ಮತ್ತು ನಮ್ಮ ಪಕ್ಷದವರು ಕೂಡ ಒತ್ತಾಯವನ್ನು ಮಾಡಿದ್ದರು. ಆಗ ಯಾವ ಒತ್ತಡವೂ ಇಲ್ಲದೇ ನಾವು ಒಪ್ಪಿಕೊಂಡಿದ್ದೆವು. ಅದಕ್ಕೆ ಸದನದ ಸಮಿತಿಯನ್ನು ಮಾಡಲು ಸೂಚಿಸಿದ್ದೆವು. ಏನಾದರೂ ಒಂದು ಆಧಾರವು ಬೇಕಾಗುತ್ತದೆ. ಆ ಆಧಾರದ ಮೇಲೆ ರೈತರುಗಳಿಗೆ ನಾವು ಎಷ್ಟರಮಟ್ಟಿಗೆ ಸಹಾಯ ಮಾಡಬಹುದು ಎಂಬುದನ್ನು ಸಮಿತಿಯು ಹೋಗಿ ನೋಡಿ ಬರಲಿ, ಎಂದು ಹೇಳಿದುದ್ದನ್ನು

ಅವರು ಒಪ್ಪಿಕೊಂಡರು. ಹೀಗೆ ಜಂಟಿ ಸದನದ ಸಮಿತಿಯು ಅಲ್ಲಿಗೆ ಹೋಗಿ ಸ್ಥಳ ಪರಿಶೀಲನೆ ಮಾಡಿ ಅಲ್ಲಿರತಕ್ಕಂಥ ರೈತರುಗಳನ್ನು ಕಂಡು ಮಾತನಾಡಿ, ಕೆಲವು ಕಡೆಗಳಲ್ಲಿ, ಸಾವುಗಳು ಆದ ಕಡೆಗಳಲ್ಲಿ ಸಾವು ಏಕೆ ಆಯಿತು ? ಏನು ಕಾರಣ ಎಂಬುದನ್ನು ಕೇಳಿ ಒಂದು ತಾತ್ಕಾಲಿಕ ವರದಿಯನ್ನು ಕೊಟ್ಟಿದ್ದಾರೆ. ಆ ತಾತ್ಕಾಲಿಕ ವರದಿಯಲ್ಲಿ ಏನು ರೆಕಮೆಂಡ್ ಮಾಡಿದ್ದಾರೆ, ಅದನ್ನು ನಾನು ನೋಡಿ, ಬೇರೆ ರಾಜ್ಯಗಳ ಸರಕಾರಗಳು ಇಂಥದ್ದೇ ಸಂದರ್ಭಗಳಲ್ಲಿ ಯಾವ ಕ್ರಮವನ್ನು ಕೈಗೊಂಡಿದ್ದಾರೆ ಎಂಬುದನ್ನು ನೋಡಿ ನಾವು ಸದನಕ್ಕೆ ತಿಳಿಸುತ್ತೇವೆ ಎಂದು ಹೇಳಿದ ಮೇಲೆ ವಿರೋಧ ಪಕ್ಷದವರೆಲ್ಲರೂ ಒಪ್ಪಿಕೊಂಡು ಸಹಕರಿಸುತ್ತೇವೆ ಎಂದು ಹೇಳಿದರು. ನಾವು ಮೊನ್ನೆಯ ಸಂಪುಟದ ಸಭೆಯಲ್ಲಿ ಎಲ್ಲಾ ದೀರ್ಘವಾದ ವಿವರಗಳನ್ನು ತರಿಸಿಕೊಂಡು ನೋಡಿ ಒಂದು ಸಂಕ್ಷಿಪ್ತವಾದ ಹೇಳಿಕೆಯನ್ನು, ನಮ್ಮ ಸದನ ಸಮಿತಿಯ ರೆಕಮೆಂಡೇಷನ್, ಬೇರೆ ರಾಜ್ಯ ಸರಕಾರಗಳು ಇಂಥ ಸಂದರ್ಭಗಳಲ್ಲಿ ಮಾಡಿರತಕ್ಕಂಥ ಸಹಾಯಗಳು ಮುಂತಾಗಿ ಎಲ್ಲವನ್ನೂ ಸೇರಿಸಿ, ಒಂದು ಹೇಳಿಕೆಯನ್ನು ಕೊಡುತ್ತಾ ಇದ್ದೇನೆ.

"The report of the Joint Legislature Committee on Crop loss and suicide by farmers has been considered by the Government, After consideration of all aspects of the matter, the Government has decided to give inputs subsidy assistance in respect of crop affected by fresh attack in those talukas of Bidar and Gulbarga districts where loss is 50% or more. The assistance will be given irrespective of the land holding at the rate of Rs. 750/- per Hectare subject to a maximum of Rs. 3000/- per farmer, the extent of land maximum will be 4 Hectares. The farmers covered by crop Insurance will not be included. In case of deaths due to crop failure, the assistance of Rs. 1,00,000/- will be given in accordance with the recommendation of the Comitteee".

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಮಾನ್ಯ ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರ ಮನವಲಿಸಬೇಕೆಂದು ನಾವು ಈ ಸದನದ ಸಮಿತಿಯ ರಿಪೋರ್ಟ್ ಬಂದಮೇಲೆ, ಅದನ್ನು ನೋಡಿಕೊಂಡು ಕ್ರಮವನ್ನು ಜರುಗಿಸುತ್ತಾರೆ ಎಂದು ನಾವು ತಿಳಿದುಕೊಂಡಿದ್ದೇವೆ. ಅದರ ಜೊತೆಗೆ ಅಕ್ಕಪಕ್ಕದ ರಾಜ್ಯಗಳಲ್ಲಿಯೂ ಕೂಡ ಯಾವ ರೀತಿಯ ಪರಿಹಾರವನ್ನು ಕೊಟ್ಟಿದ್ದಾರೆ, ಅದರ ಆಧಾರದ ಮೇಲೆ ಹೆಚ್ಚು ಸಹಾಯವನ್ನು ರೈತರಿಗೆ ಕೊಡುತ್ತಾರೆ ಎಂಬ ಒಂದು ನಂಬಿಕೆಯ ನಮಗೆ ಇತ್ತು. ಜಂಟಿ ಸದನದ ಸಮಿತಿಯನ್ನು ನಮ್ಮೆಲ್ಲರ ಒಪ್ಪಿಗೆಯ ಮೇರೆಗೆ ಮಾಡಿದ್ದಾರೆ. ಮಾನ್ಯ ಸಚಿವರು ಅದರ ಬಗ್ಗೆ ಸಚಿವ ಸಂಪುಟದಲ್ಲಿ ಡಿಸ್‌ಕಸ್ ಕೂಡ ಮಾಡಿದ್ದಾರೆ ಎಂಬ ಮಾತನ್ನು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಒಂದು ಎಕರೆಗೆ ಕನಿಷ್ಟಪಕ್ಷ 500 ರೂ.ಗಳನ್ನು ಪರಿಹಾರವಾಗಿ ಕೊಡಬೇಕೆಂದು ಅದರಲ್ಲಿ ರೆಕಮೆಂಡೇಷನ್ ಇದೆ. ಆದರೆ ಈಗ ಇವರೇನು ಮಾಡಿದರು ? ಶಹಪೂರ್ ನ್ಯಾಯ ಎಂದು ನಮ್ಮ ಕಡೆ ಹೇಳುತ್ತಾರೆ, ನಿಮ್ಮ ಕಡೆಯಲ್ಲಿ ಹಾವೇರಿ ನ್ಯಾಯ ಎಂದು ಹೇಳುವ ರೀತಿಯಲ್ಲಿ ಖಾಜಿನ್ಯಾಯ ಎಂದು ಹೇಳುವ ರೀತಿಯಲ್ಲಿ ಅದೂ ಬೇಡ, ಇದೂ ಬೇಡ ಎನ್ನುವ

ರೀತಿಯಲ್ಲಿ 750 ರೂ.ಗಳು ಎಂದು ಮಾಡಿದರು. ಇದರಲ್ಲಿ ಯಾವುದೇ ಪ್ರತಿಷ್ಠೆಯ ಪ್ರಶ್ನೆ ಬೇಡ. ಯಾಕೆಂದರೆ ಸದನ ಸಮಿತಿಯು ತಮ್ಮ ನೇತೃತ್ವದಲ್ಲಿಯೇ ಮಾಡಿದ ಹಾಗೆ ಆಗುತ್ತದೆ. ಸಮಿತಿಯವರು 500 ರೂ.ಗಳು ಎಕರೆಗೆ ಅಂದರೆ ಹೆಕ್ಟೇರ್‌ಗೆ 125 ರೂ.ಗಳು ಆಗಬಹುದು. ಅದೇ ಮೊತ್ತದ ಹಣವನ್ನು ಬೇರೆ ರಾಜ್ಯಗಳೂ ಕೂಡ ಕೊಟ್ಟಿರತಕ್ಕಂಥಾದ್ದು ಇದೆ. ಆದ್ದರಿಂದ ಇವೊತ್ತು ಇವರು ಪುನಃ 500 ರೂ.ಗಳನ್ನು ಯಾಕೆ ಕಡಿಮೆ ಮಾಡಿದರು ಎಂದು ಗೊತ್ತಾಗುತ್ತಿಲ್ಲ. ಸಮಿತಿಯವರು ಮ್ಯಾಗ್ನಿಮಮ್ 2500 ರೂ.ಗಳನ್ನು ಕೊಡಬೇಕೆಂದು ರೆಕಮೆಂಡ್ ಮಾಡಿದ್ದಾರೆ. Irrespective of any holding ಈಗ ಓದುವಾಗ irrespective of any holdingಎಂದು ಹೇಳಿದರು. ಅಂದರೆ ಹತ್ತು ಎಕರೆ ಎಂದು ಇಟ್ಟುಕೊಳ್ಳಿ. ಆ ರೆಕಮೆಂಡೇಷನ್ಸ್‌ನಲ್ಲಿ ಇರತಕ್ಕಂಥಾದ್ದು irrespective of any limitation ಲ್ಯಾಂಡ್‌ರಿಫ್ಹೋರ್ಮ್ಸ್ ಆಕ್ಟ್‌ನ ಪ್ರಕಾರ ಗರಿಷ್ಟ 54 ಎಕರ ಇರತಕ್ಕಂಥಾದ್ದು ಇದೆ. ಡ್ರೈಲ್ಯಾಂಡ್ ಕೂಡ ಹಾಗೆ ಇರುತ್ತದೆ. ಆ ರೆಕಮೆಂಡೇಷನ್ಸ್ ಕೂಡ ಒಪ್ಪಿಕೊಂಡಿಲ್ಲ.500 ರೂ.ಗಳು ಒಂದು ಎಕರೆಗೆ ಎಂದು ಹೇಳಿದ್ದನ್ನೂ ಕೂಡ ಒಪ್ಪಿಕೊಂಡಿಲ್ಲ. ನಾವು 500 ರೂ.ಗಳನ್ನು ಕೇಳಿದ್ದೆವು, ಕನಿಷ್ಟ ಪಕ್ಷ 500 ರೂ. ಗಳನ್ನು ಕೊಡಿ ಎಂದು ಸಮಿತಿಯವರು ಹೇಳಿದ್ದಾರೆ ಅದನ್ನು ಸರಕಾರದವರು ಒಪ್ಪಿಕೊಳ್ಳುವ ಕೆಲಸವನ್ನು ಮಾಡಬೇಕಾಗಿತ್ತು. ಇದರಿಂದ ಸರಕಾರದ ಮೇಲೆ ಹೆಚ್ಚಿನ ಭಾರ ಬೀಳುತ್ತದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಾಗೆಯೇ ಇಷ್ಟೊಂದು ಹಣವನ್ನು ಸರಕಾರದವರು ಕೂಡಿಸಿಕೊಳ್ಳುವುದು ಕೂಡ ಕಷ್ಟವಾಗುತ್ತದೆ ಎಂಬುದನ್ನು ಒಪ್ಪಬೇಕಾಗುತ್ತದೆ. ಆದರೆ ಕಷ್ಟದಲ್ಲಿ ಬೇರೆ ದಾರಿ ಇಲ್ಲ. ಯಾವಾಗ ರೈತರು ಕಷ್ಟದಲ್ಲಿರುತ್ತಾರೋ ಅಂತಹ ಸಂದರ್ಭದಲ್ಲಿ ನಾವು ಯಾವುದಾದರೂ ಸೋರ್ಸನ್ನು ಹುಡುಕಿ ಪರಿಹಾರ ಕೊಡಬೇಕಾಗುತ್ತದೆ. ಅದಕ್ಕೆ ನಾನು ಪುನಃ ಅವರಲ್ಲಿ ಕೇಳಿಕೊಳ್ಳುತ್ತೇನೆ, ತಲಾ ಎಕರೆಗೆ 500 ರೂಗೆ ಒಪ್ಪಿಕೊಳ್ಳಿ, ಇದಕ್ಕಾಗಿ ಪುನಃ ಕ್ಯಾಬಿನೆಟ್‌ಗೆ ಹೋಗಬೇಕಾದ ಅವಶ್ಯಕತೆ ಇಲ್ಲ. 500 ರೂಗೆ ನೀವು ಒಪ್ಪಿಕೊಂಡರೆ ಇನ್‌ಪುಟ್ಸನ್ನು ಖರೀದಿಸಲು ಅವರಿಗೆ ಸ್ವಲ್ಪ ಅನುಕೂಲವಾಗಬಹುದೇ ಹೊರತು ನಾವು ಅವರಿಗೆ ಹೇಳಿದಷ್ಟು ಸಹಾಯ ಮಾಡಿದಂತಾಗುತ್ತದೆ. ಆದರೆ ರೈತರು ತೊಂದರೆಯಲ್ಲಿದ್ದಾಗ ಸಹಾಯಕ್ಕೆ ಸರ್ಕಾರ ಬಂತು ಎಂಬ ಉಪಕಾರ ತಾವು ಮಾಡಿದಂತಾಗುತ್ತದೆ. ಎಲ್ಲೆಲ್ಲಿ ಗರಿಷ್ಟ 2500 ರೂ. ಕೊಡಬೇಕೆಂದಿತ್ತೋ ನಾವು5000 ರೂ. ಆಗಬೇಕೆಂದು ಕೇಳಿದ್ದೆವೋ ಅದನ್ನು ಕನಿಷ್ಟ4 ಸಾವಿರ ಆದರೂ ಮಾಡಿ,4 ಎಕರೆಗಳಿರಬೇಕೆಂಬುದನ್ನು ಹೊರತುಪಡಿಸಿ, ಏಕೆಂದರೆ ಹಿಡುವಳಿ ಪ್ರಮಾಣ ನೋಡದೆಯೇ ಸಹಾಯ ಮಾಡಬೇಕೆಂಬುದು ಸದನಸಮಿತಿಯ ಶಿಫಾರಸಿದೆ. ಇದಕ್ಕೆ ತಾವು ಒಪ್ಪಿಕೊಳ್ಳಿ. ಒಂದು ವೇಳೆ ನಾವು ಇಷ್ಟು ಮಾಡಿದ್ದೇವೆ, ನೀವು ಏನು ಬೇಕಾದರೂ ಮಾಡಿ ಅಂದರೆ ಅಧ್ಯಕ್ಷರೇ, ನಿರ್ವಾಹವಿಲ್ಲ ನಾವು ಬೇರೆ ಕ್ರಮ ಜರುಗಿಸಬೇಕಾಗುತ್ತದೆ ಅದನ್ನು ಹೇಳಿ ಹೆದರಿಸಬೇಕೆಂಬ ದೃಷ್ಟಿ ನನಗಿಲ್ಲ, ದಯವಿಟ್ಟು ಇನ್ನೊಮ್ಮೆ ಕೇಳಿಕೊಳ್ಳುತ್ತೇನೆ, ಇದನ್ನು ಹೆಚ್ಚುಮಾಡಿ ಆ ಮೂಲಕ ಜಂಟಿ ಸದನಸಮಿತಿ ವರದಿಗೆ ಮಾನ್ಯತೆ ಕೊಡಬೇಕು; ಇದರ ಬಗ್ಗೆ ತಾವು ಹೇಳಬೇಕು.

+ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಅಧ್ಯಕ್ಷರೇ, ರಾಜ್ಯದಲ್ಲಿ ಎಂದೂ ಈ ಸ್ಥಿತಿ ಬಂದಿರಲಿಲ್ಲ. ಸದನದಲ್ಲಿ ಪ್ರಸ್ತಾಪಿತವಾದ ಮೇಲೆ ಸರ್ಕಾರವೂ ಸದನಸಮಿತಿ ಕಳುಹಿಸಿತು. ಅದರ ವರದಿ ಮೇಲೆ ಕಳೆದ ಸಾರಿ ನಾವು ಸಾಕಷ್ಟು ಚರ್ಚೆ ಮಾಡಿದಾಗ ನಮಗೊಂದು ನಾಲ್ಕಾರು ದಿವಸ

ಅವಕಾಶ ಕೊಡಿ ಎಂದು ಸರ್ಕಾರದಿಂದ ಉತ್ತರವೂ ಬಂತು. ಇದರಲ್ಲಿ ಹಠಮಾಡಬಾರದೆಂದು, ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತಾರೆಂಬ ವಿಶ್ವಾಸದಿಂದ ಒಪ್ಪಿಕೊಂಡೆವು. ಆ ಸಂದರ್ಭದಲ್ಲಿ ಹೇಳಿದ ಅಂಶಗಳೇನೆಂದರೆ, ಒಂದು ಸದನ ಸಮಿತಿಯ ವರದಿಯನ್ನು ಪೂರ್ಣ ನಾವು ನೋಡುತ್ತೇವೆ, ಎರಡನೆಯದು ಬೇರೆ ರಾಜ್ಯಗಳಲ್ಲಿ ಯಾವರೀತಿ ಕೊಟ್ಟಿದ್ದಾರೆ ಅದನ್ನೂ ಕನ್‌ಸಿಡರ್ ಮಾಡುತ್ತೇವೆ, ಸಚಿವಸಂಪುಟದಲ್ಲಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಿದಾಗ ನಾವು ಧರಣಿಯನ್ನು ವಾಪಸ್ ತೆಗೆದುಕೊಂಡೆವು. ಇದು ಮುಖ್ಯಮಂತ್ರಿಗಳದೇ ವೈಯಕ್ತಿಕ ಜವಾಬ್ದಾರಿ. ಸಚಿವಸಂಪುಟ ಮುಖ್ಯ ಮಂತ್ರಿಗಳಿಗೇ ಜವಾಬ್ದಾರಿ ಕೊಟ್ಟಿದೆ ಎಂಬುದನ್ನು ಗುಜರಾತಿನಲ್ಲಿ ನಾನು ಓದಿದೆ. ಹಾಗಾಗಿ ಮುಖ್ಯ ಮಂತ್ರಿಗಳು ಕೊಟ್ಟಿರುವ ಪರಿಹಾರವೇನಿದೆ ಇದನ್ನು ಕೇಳಿದ ಕೂಡಲೇ ರಾಜ್ಯದ ತೊಂದರೆಯಲ್ಲಿರುವ ರೈತರಿಗೆ ಖಂಡಿತ ಆಘಾತವಾಗುತ್ತದೆ. ಎಲ್ಲಾ ಪಕ್ಷದವರಿರುವ ಸದನಸಮಿತಿಗೆ ಬೆಲೆಯೇ ಇಲ್ಲದಂತಾಗಿಹೋಯಿತು. ಬೇರೆ ರಾಜ್ಯಗಳಿಂದ ತರಿಸಿಕೊಂಡಿರುವ ವರದಿಗಳಿಗೂ ಅರ್ಥವೇ ಇಲ್ಲ. ಇದರಲ್ಲಿ ನಾವು ಮತ್ತೆ ಹಠ ಮಾಡುವ ಪ್ರಶ್ನೆ ಇಲ್ಲ, ಮುಖ್ಯಮಂತ್ರಿಗಳಿಗೆ ಮನವಿ ಮಾಡುವುದು ಏನೆಂದರೆ ಸದನಸಮಿತಿ ವರದಿಯನ್ನು ಮಾತ್ರ ಇಂಪ್ಲಿಮೆಂಟ್ ಮಾಡಿ, ಜಾಸ್ತಿ ಏನೂ ಹೇಳುತ್ತಿಲ್ಲ ಇವರು ಎಕರೆಗೆ 750 ರೂ ಅಂದರೆ ಕಾಜಿನ್ಯಾಯ ಎಂದು ಮಾಡಿದಂತಾಗುತ್ತದೆ. ಅತ್ತಾಗೂ ಇಲ್ಲ ಇತ್ತಾಗೂ ಇಲ್ಲ ಎನ್ನುವಂತೆ. ಬೇರೆ ರಾಜ್ಯಗಳವರೂ ನಮ್ಮದನ್ನು ನೋಡುತ್ತಾರೆ, ಕರ್ನಾಟಕದಲ್ಲಿ ಇಷ್ಟ ಕಮ್ಮಿ ಕೊಟ್ಟಿದ್ದಾರೆ ನಾವು ಜಾಸ್ತಿ ಕೊಟ್ಟಿದ್ದೇವೆ ಎನ್ನುವ ಸ್ಥಿತಿ ಬರುತ್ತದೆ. ಆದ್ದರಿಂದ ಸದನಸಮಿತಿ ಹೇಳಿರುವಂತೆ ಎಕರೆಗೆ 500 ರೂನಂತೆ 10 ಎಕರೆಗೆ 4 ಸಾವಿರದಂತೆಮಾಡಿದರೆ ಅನುಕೂಲ ಆಗುತ್ತದೆ. ಕೇಂದ್ರ ಸಹ ಸಹಾಯ ಮಾಡುತ್ತದೆ ಎಂದು ಹೇಳಿರುವ ಸಂದರ್ಭದಲ್ಲಿ ಮುಖ್ಯಮಂತ್ರಿಗಳಿಗೆ ಇಡೀ ಸದನವೇ ಜವಾಬ್ದಾರಿ ಕೊಡುತ್ತಿದ್ದೇವೆ, ಸದನದಲ್ಲೇ ದಯವಿಟ್ಟು ಪ್ರಕಟಿಸಲಿ, ಹೆಕ್ಟೇರ್‌ಗೆ 750 ಇರುವುದನ್ನು ಎಕರೆಗೆ 500 ರೂ. ಮಾಡಿ, ನಿಮ್ಮ ತೊಂದರೆಯಲ್ಲಿ ನಾವು ಇದ್ದೇವೆಂದು ದಿಕ್ಕಿನಲ್ಲಿ ಅವರು ಯೋಚಿಸಲಿ ಎಂದು ಮನವಿ ಮಾಡಿಕೊಳ್ಳುತ್ತೇನೆ.

+ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, ಸದನ ಸಮಿತಿ ತನ್ನ ವರದಿ ಸರ್ವಾನುಮತದಿಂದ ಕೊಟ್ಟಿದೆ. ನನಗೂ ಗೊತ್ತಿದೆ, ಬೆಳೆ ನಾಶವಾದಾಗ ಅದರ ಪೂರ್ಣ ಪರಿಹಾರವನ್ನು ಇವತ್ತಿನ ಸ್ಥಿತಿಯಲ್ಲಿ ಯಾವುದೇ ಸರ್ಕಾರಕ್ಕೂ ಕೊಡಲು ಸಾಧ್ಯವಿಲ್ಲ. ಯಾವುದೇ ಭೇದಭಾವವಿಲ್ಲದ ಸದನಸಮಿತಿ ವಾಸ್ತವಿಕ ವರದಿಯನ್ನು ಕೊಟ್ಟಿತು, ಸಚಿವಸಂಪುಟದಲ್ಲಿ ಮುಂದೆ ಹೋಗಿ ಅದಕ್ಕಿಂತ ಇನ್ನೂ ಹೆಚ್ಚು ಪರಿಹಾರ ಘೋಷಿಸಬೇಕೇ ಹೊರತು ವರದಿಯ ಅಂಶಗಳನ್ನೇ ಇಂಪ್ಲಿಮೆಂಟ್ ಮಾಡಲು ಹಿಂದೆ ಸರಿದರೆ ಅದರ ಸ್ಯಾಂಕ್ಟಿಟಿ ಏನು ಉಳಿಯಿತು? ಮುಖ್ಯಮಂತ್ರಿಗಳಿಗೆ ಇವತ್ತಿನ ರಾಜ್ಯದ ರೈತನ ಸ್ಥಿತಿಗತಿಗಳು ಗೊತ್ತಿದೆ, ಬೀದರ್, ಗುಲ್ಬರ್ಗ ಅಲ್ಲ ಇಡೀ ರಾಜ್ಯದಲ್ಲಿ ಈ ಸ್ಥಿತಿ ಇದೆ ಅಲ್ಲಂತೂ ಬೆಳೆ ಸಂಪೂರ್ಣ ನಾಶವಾಗಿದೆ. ಹೀಗಿರುವಾಗ ರೋಗರುಜಿನ ತಪ್ಪಿಸುವುದಕ್ಕಾಗಿ ತಲಾ ಎಕರೆಗೆ ಒಂದು ಸಾವಿರ ಅವನು ಖರ್ಚು ಮಾಡಿದ್ದಾನೆ, ನಾವು ಕೊಡುವ ಪರಿಹಾರ ನಾಳೆ ಮಳೆಬಿದ್ದಮೇಲೆ ಬಿತ್ತನೆ ಬೀಜಕ್ಕೂ ಸಾಕಾಗುವುದಿಲ್ಲ. ಅದಕ್ಕೆ ನಾನು ಒತ್ತಾಯಮಾಡುವುದು, ಹಣಕಾಸಿನ ತೊಂದರೆ ಇದ್ದರೂ ಸಣ್ಣ ಮಧ್ಯಮ ರೈತರಿಗಾಗಿ ಕೇಂದ್ರದಲ್ಲಿ ಈಗಾಗಲೇ ವಿನಂತಿ ಸಲ್ಲಿಸಿದ್ದೀರಿ, ಅದು ಬಂದರೆ ಅದನ್ನೂ

ತೆಗೆದುಕೊಳ್ಳಿ. ಇಲ್ಲಿ ಸದನಸಮಿತಿ ಶಿಫಾರಸ್ ಏನಿದೆ ಅದಕ್ಕೇನೂ ಕೊರತೆ ಮಾಡದಂತೆ ಕ್ರಮ ಕೈಗೊಳ್ಳಿ. ನೀವು ಮೂರು ಸಾವಿರ ಗರಿಷ್ಟ ಅಂದುಬಿಟ್ಟರೆ, ನಾನು ಹೇಳುತ್ತೇನೆ, ನಾನೂ ಒಬ್ಬ ಸಣ್ಣ ರೈತ, ನನ್ನ 10 ಎಕರೆ ಬೆಳೆ ಪೂರ್ಣ ನಾಶವಾಗಿದೆ ಹಾಗಾದಾಗ ಗರಿಷ್ಟ 3 ಸಾವಿರ ಕೊಡುತ್ತೇವೆ ಅಂದರೆ ತಲಾ ಎಕರೆಗೆ ಎಷ್ಟು ಕೊಟ್ಟಹಾಗಾಯಿತು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ವಿರೋಧಪಕ್ಷದ ನಾಯಕರು ಆಂಧ್ರಪ್ರದೇಶದ ಆಜ್ಞೆಯನ್ನು ತೋರಿಸಿದರು. ಅದರಲ್ಲಿ ಬೇಳೆಗೆ ಸಂಬಂಧಿಸಿದಂತೆ 750 ರೂ ಕೊಟ್ಟಿದ್ದಾರೆ ಎಂದು ತೋರಿಸಿದ್ದಾರಿಂದ, ಅಲ್ಲಿ ಶೇಕಡ 75 ಲಾಸ್ ಇರುವುದು, ಆದರೆ ಇಲ್ಲಿ 50 ಪರ್ಸೆಂಟ್ ಲಾಸ್ ಇದೆ ಆದರೂ 750 ರೂ ಕೊಡುತ್ತಿದ್ದೇವೆ ಆಂಧ್ರದ ಆಜ್ಞೆ ಅನುಸರಿಯೇ ಮುಖ್ಯಮಂತ್ರಿಗಳು ಈ ತೀರ್ಮಾನದ ತೆಗೆದುಕೊಂಡಿದ್ದಾರೆ.

ಶ್ರೀ ಬಿ.ಎಸ್ ಯಡಿಯೂರಪ್ಪ : ಆಂಧ್ರದ ಉದಾಹರಣೆ ಏಕೆ ತೆಗೆದುಕೊಳ್ಳುತ್ತೀರಿ? ನಿಮ್ಮ ಧಾರಾಳತನವೇನು?

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) : ಇವೆಲ್ಲಾ ಚರ್ಚೆಯಾಗಿದೆ ಅಧ್ಯಕ್ಷರೇ,

(ಗೊಂದಲ)

ನಮ್ಮಲ್ಲಿ ಗರಿಷ್ಟ 88 ಪರ್ಸೆಂಟ್ ಲುಕ್ಸಾನು ಆಗಿರುವುದು, ಇಳುವರಿಯಲ್ಲಿ 50 ಪರ್ಸೆಂಟಿಗಿಂತ ಹೆಚ್ಚು ಆಗಿದ್ದರೆ ತೆಗೆದುಕೊಂಡಿದ್ದೇನೆ, ಹಿಂದೆ 92-93ರಲ್ಲಿ ನಷ್ಟವಾದಾಗ ಹಿಂದಿನ ಸರ್ಕಾರವೂ ಕೊಟ್ಟಿದೆ ಆಗ 75 ಪರ್ಸೆಂಟಿಗಿಂತ ಹೆಚ್ಚು ಲುಕ್ಸಾನಾಗಿದ್ದರೆ ಮಾತ್ರ ಕೊಟ್ಟಿರುವುದು, ಈಗ 50 ಪರ್ಸೆಂಟ್‌ಗೆ ಹೋಗಿದ್ದೇವೆ. 500 ರೂ ಹೆಕ್ಟೇರ್‌ಗೆ ಆಗ ಕೊಟ್ಟಿದ್ದಾರೆ. irrespective of the holding they have given Rs. 500/- per Hectare, it comes to Rs. 2,000/- per farmer. We have given Rs. 3000/- ಆಮೇಲೆ ಮ್ಯಾಕ್ಸಿಮಮ್ 4 ಹೆಕ್ಟೇರ್ಸ್ ಎಂದು ನೀವು ಹೇಳಿದ್ದೀರಿ. ಕಮಿಟಿಯವರು ಕೊಟ್ಟಿರುವ ರಿಪೋರ್ಟ್ ಬಗ್ಗೆ ಗೌರವ ಇದೆ. ಯಾವುದೇ ಸರ್ಕಾರ ಎಲ್ಲಾ ರೈತರಿಗೆ ಆಗಿರುವ ನಷ್ಟವನ್ನು ಭರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಯಾವ ಸರ್ಕಾರ ಕೂಡ ಭರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೋಸ್ಕರವಾಗಿ ಒಂದು ಅಳತೆಗೋಲನ್ನು ಇಟ್ಟುಕೊಂಡು ಯಾವ ಪ್ರಮಾಣದಲ್ಲಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಷ್ಟೆಲ್ಲಾ ನಾವು ಬೀದರ್ ಮತ್ತು ಗುಲ್ಬರ್ಗಾ ಈ ಎರಡು ಜಿಲ್ಲೆಗಳಿಗೆ ಸೀಮಿತವಾಗಿ ಮತ್ತು ತೊಗರಿಬೇಳೆಗೆ ಸೀಮಿತವಾಗಿ ಮಾಡಿದರೂ ಕೂಡ ಸುಮಾರು 15ರಿಂದ 20 ಕೋಟಿ ರೂಪಾಯಿಗಳನ್ನು ನಾವು ಕೊಡಬೇಕಾಗುತ್ತದೆ. ಇದರಿಂದ ಎಲ್ಲಾ ವಿಚಾರಗಳನ್ನು ಕೂಡ ಗಮನದಲ್ಲಿಟ್ಟುಕೊಂಡು ಸರ್ಕಾರದ ಆರ್ಥಿಕ ಪರಿಸ್ಥಿತಿ, ಹಣಕಾಸಿನ ಪರಿಸ್ಥಿತಿ ಇವೆಲ್ಲಾ ನೋಡಿಕೊಂಡು ಮಾಡಬೇಕಾಗುತ್ತದೆ. ಮತ್ತೆ ನಾವು ಸಣ್ಣ ರೈತ, ದೊಡ್ಡ ರೈತ ಎಂದು ಇವನ್ನೆಲ್ಲಾ ನೋಡುವುದಕ್ಕೆ ಹೋಗಿಲ್ಲ. 4 ಹೆಕ್ಟೇರ್ಸ್ ಎಂದು ಹೇಳಿಬಿಟ್ಟಿದ್ದೇವೆ. ಹತ್ತು ಎಕರೆಗೆ ಮಾತ್ರ ಎಂದು ಹೇಳಿದ್ದೇವೆ. ಮತ್ತೆ ಎಲ್ಲಾ ರೈತರಿಗೂ ಕೂಡ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಈ ಎಲ್ಲಾ ಪರಿಸ್ಥಿತಿಯನ್ನು

ಗಮನದಲ್ಲಿಟ್ಟುಕೊಂಡು ನಾವು ಮಾಡಿದ್ದೇವೆ. ಬಹುಶಃ ಇದು ರೀಸನಬಲ್ ಆಗಿದೆ ಎಂದು ನನ್ನ ಅಭಿಪ್ರಾಯ. ಆದುದರಿಂದ ಇದನ್ನೆಲ್ಲಾ ಒಪ್ಪಿಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಆತ್ಮಹತ್ಯೆ, ಸತ್ಯಾಗ್ರಹ ಇಷ್ಟೆಲ್ಲಾ ಮಾಡಿಕೊಂಡು ಜನರು ಕೇಳಿದ್ದರೇ? ಅದನ್ನು ನೇರವಾಗಿ ಸರ್ಕಾರ ಒಂದ ಅಪ್ಲಿಕೇಷನ್ಸನ್ನು ಕೊಟ್ಟಿತ್ತು. ಅಜಿಟೇಷನ್ಸ್ ಬಗ್ಗೆ ಅಥವಾ 20-30 ಜನರು ಇವತ್ತೇನು, ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಆಗ ಇದು ಇರಲಿಲ್ಲ. ಇದೇ ರೀತಿಯಾಗಿ ಚರ್ಚೆಯಾಗಿದೆಯೇ ಎಂದು ತೆಗೆದುನೋಡಿ. ಅದನ್ನು ಸುಮ್ಮೋಮೋಟೊ ಅಲ್ಲಿಗೆ ಹೋದಾಗ ಅಪ್ಲಿಕೇಷನ್ಸ್ ಬಂದಾಗ ಮಾತ್ರ ನೇರವಾಗಿ ಕೊಟ್ಟಿದ್ದು. ಅದನ್ನು ಬಿಟ್ಟು ಈಗ ನೀವು 200 ಕೊಟ್ಟಿದ್ದೀರಿ, ನಾನು 300 ಕೊಡುತ್ತೇನೆ ಎಂದೆರ ಸರಿಯಾಗುವುದಿಲ್ಲ. ಈಗ ಸದನ ಸಮಿತಿಯಾಗಿತ್ತೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇವರು ಸಹಾಯ ಮಾಡಿದ್ದೇವೆ ಎಂದು ಹೇಳುವುದೆಲ್ಲಾ ನಾವು ಕೇಳುತ್ತೇವೆ. ನಾವು ಮಾಡಿದ್ದೇವೆ ಎಂದರೆ ಅದು ಸರಿಯಿಲ್ಲ ಎಂದು ಏತಕ್ಕೆ ಹೇಳುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೇಗೆ ಸರಿ ಮಾಡುವುದು ಎಂದರೆ ಇವತ್ತಿನ ಪರಿಸ್ಥಿತಿಗೆ ಅನುಗುಣವಾಗಿ ನಾವು ನಡೆದುಕೊಳ್ಳಬೇಕಾಗುತ್ತದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅದೇ ಪರಿಸ್ಥಿತಿಯಿರುವುದರಿಂದ ನೀವು 500 ರೂ. ಕೊಟ್ಟಿದ್ದರೆ ನಾವು 750 ರೂಪಾಯಿಗಳನ್ನು ಕೊಡುತ್ತಿರುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಎಲ್ಲಾ ಬೆಳೆಗೂ ಕೊಡುತ್ತಿದ್ದೀರೋ? ಮತ್ತು ಇದು ಹೇಗೆ ಆಗುತ್ತದೆ?

ಶ್ರೀ ವಾಟಾಳ್ ನಾಗರಾಜ್ : ಎಲ್ಲಾ ಬೆಳೆಗೂ ಕೊಡದಿದ್ದರೆ ನ್ಯಾಯ ದೊರಕುವುದಿಲ್ಲ. ಪ್ರಾಮಾಣಿಕವಾಗಿ ಚಿಂತನೆ ಮಾಡಬೇಕು. ಎಲ್ಲಾ ಬೆಳೆಗೂ ಕೊಡಬೇಕಾಗುತ್ತದೆ. ಯಾವುದೋ ಒಂದು ಬೆಳೆಗೆ ಕೊಟ್ಟು ಮಾಡುವುದು ಸರಿಯಾಗುವುದಿಲ್ಲ. ಇದರಲ್ಲಿ ಸಣ್ಣ ರೈತ, ದೊಡ್ಡ ರೈತ ಎಂದು ವಿಭಜನೆ ಮಾಡಿದರೆ ಅದೇನು ಒಳ್ಳೆಯ ನೀತಿಯಾಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ : 20 ಎಕರೆ ಇಟ್ಟಿರುವುದು ಅವನೇನು ಶ್ರೀಮಂತನೇ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಆ ಕಡೆ ಶೇಂಗಾ ಬೆಳೆದಿರುತ್ತಾನೆ. ಈ ಕಡೆ ತೊಗರಿಯನ್ನು ಬೆಳೆದಿರುತ್ತಾನೆ. ಶೇಂಗಾಗೆ ಇಲ್ಲ, ತೊಗರಿಗೆ ಮಾತ್ರ ಕೊಡುತ್ತೇವೆಂದರೆ ಹೇಗೆ?

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಮಾನ್ಯ ಬಾಬಾ ಗೌಡ ಪಾಟೀಲರು ನನಗೆ ಫೋನ್ ಮಾಡಿ ಹೇಳಿದ್ದರು, ಬಹಳ ಕಷ್ಟವಾಗಿದೆ ನಾನು ಕೇಂದ್ರಸರ್ಕಾರಕ್ಕೆ ತಿಳಿಸುತ್ತೇನೆ. ಏಕೆಂದರೆ ಅವರು ಸಚಿವರು. ನಾನು ಪ್ರಧಾನಮಂತ್ರಿಗಳನ್ನು ಕಂಡಾಗ ನಾವು ಮೊದಲು ಹೇಳಿದ್ದು ಇದೇ ಸಮಸ್ಯೆ. ಅವರು ಸಹಾನುಭೂತಿಯಿಂದ ಕೇಳಿದರು. ಬಾಬಾಗೌಡ ಪಾಟೀಲರು ಪ್ರಯತ್ನ ಮಾಡಿದರು. ನಾವು ಈ ಅನೌನ್ಸ್‌ಮೆಂಟ್ ಮಾಡುವುದಕ್ಕಿಂತ ಮುಂಚೆ ಏನಾದರೋ ನಮಗೊಂದು ಪ್ರಾಮಿಸ್ ಮತ್ತೊಂದು ಏನಾದರೂ ಬಂದರೆ ನಾವು ಅದನ್ನು ಸೇರಿಸಿಕೊಂಡೇ ಮಾಡೋಣ ಎಂದು ಇದ್ದೆವು. ಆದರೆ ನಾನು ನಿರಾಶದಾಯಕವಾಗಿಲ್ಲ. Still I hope for some kind of assistance from the Centre. ಆದು ಬಂದರೆ ಅದನ್ನು ನಾವು ರೈತರಿಗೆ ಕೊಡುತ್ತೇವೆ. ನಾವೇನೂ ಇಟ್ಟುಕೊಳ್ಳುವುದಿಲ್ಲ. ಇದರಲ್ಲಿ ಹೆಚ್ಚಿಗೆ ಕೊಡಬೇಕೆನ್ನುವ ಇಚ್ಛೆ ನಮಗೂ ಇದೆ, ಆದರೆ ಅದನ್ನು ಕೊಡುವುದಕ್ಕೆ ನಮಗೆ ಶಕ್ತಿ ಇಲ್ಲ ಯಾವ ಸರ್ಕಾರಕ್ಕೂ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬರೀ ತೊಗರಿ ಬೆಳೆಗೆ ಎಂದರೆ ಹೇಗೆ? ಜೋಳ ಬೆಳೆದವರ ಗತಿಯೇನು ?

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್(ಮುಖ್ಯಮಂತ್ರಿಗಳು) : ಹಾಗಾದರೆ ಒಂದು ಕೆಲಸ ಮಾಡೋಣ. ಕೇಂದ್ರ ಸರ್ಕಾರಕ್ಕೆ ಕೇಳೋಣ. ರಾಜ್ಯದಲ್ಲಿ ಎಲ್ಲಾ ಬೆಳೆಗಳಿಗೂ ಇನ್‌ಷ್ಯೂರೆನ್ಸ್ ಸ್ಕೀಮನ್ನು ತರಲಿ ನ್ಯಾಷನಲ್ ಪಾಲಿಸಿ ಅನ್ ಕ್ರಾಫ್ ಇನ್‌ಷ್ಯೂರೆನ್ಸ್‌ನ್ನು ಅವರು ತರಲಿ. ಎಲ್ಲಾ ಬೆಳೆಗಳಿಗೂ ಅಪ್ಲೈ ಮಾಡಲಿ. ಎಲ್ಲಾ ರೈತರಿಗೂ ಅಪ್ಲೈಯಾಗಲಿ. ಈಗ ರಾಜ್ಯ ಸರ್ಕಾರಕ್ಕೆ ಆಗುವುದಿಲ್ಲ. ಸಾಧ್ಯವಾದುದ್ದನ್ನು ಹೇಳುತ್ತೇವೆಯೇ ಹೊರತು..

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ಮಾಲ್ ಅಂಡ್ ಮಾರ್ಜಿನಲ್ ಫಾರ್ಮರ್ಸ್‌ಗೆ ಹೇಳುತ್ತೇನೆ, ತಮಗೂ ಗೊತ್ತಿರುವ ಸಂಗತಿ. ಕೇಂದ್ರ ಸರ್ಕಾರ ತಮಗೆ ಈ ಬೆಳೆ ನಾಶವಾಗಿರುವುದರಿಂದ ನೆರವು ಕೊಡುವುದು ಇದೆ. ಆದರಲ್ಲಿ ಯಾವುದೇ ಸಂಶಯ ಬೇಡ. ಇದೇ ಪ್ರಕಾರ ಇರುವುದು.

ಶ್ರೀ ಜೆ.ಹೆಚ್. ಪಟೇಲ್ : ಅವರು ಸ್ಮಾಲ್ ಅಂಡ್ ಮಾರ್ಜಿನಲ್ ಫಾರ್ಮರ್ಸ್‌ಗೆ ಏನಾದರೂ ಈ ರೀತಿ ವಿಶೇಷ ಸಹಾಯ ಮಾಡಬೇಕೆಂದು ಅವರು ಹೇಳಿದರೆ ಸದನಕ್ಕೆ ತಿಳಿಸುತ್ತೇವೆ ನಾವು. ಅದನ್ನು ನಾವು ರೈತರಿಗೆ ಕೊಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ರೀತಿ ಒತ್ತಾಯವಾದರೂ ಮಾಡಬೇಕಲ್ಲಾ. ತೆಗೆದುಕೊಳ್ಳುವ ಪ್ರಯತ್ನವನ್ನು ಮಾಡಬೇಕಲ್ಲಾ. ಈಗ ನೀವು ಇಷ್ಟನ್ನು ಮಾಡಿ ರಾಜ್ಯ ಸರ್ಕಾರದಿಂದ ಎಲ್ಲಾ ಬೆಳೆಗೂ ಲಾಸ್ ಆಗಿರುವವನಿಗೆ ಐದು ಕರೆ, ಹತ್ತು ಎಕರೆ ಎಂದು ಲಿಮಿಟ್ ಮಾಡದೇ ಎಲ್ಲಾ ರೈತರಿಗೂ ಇದನ್ನು ಅನ್ವಯಮಾಡಬೇಕು. ಇಲ್ಲದಿದ್ದರೆ ನೀವೇನು ಕೊಟ್ಟಂತೆ ಆಗುತ್ತದೆ? ಅದನ್ನೂ ಕೊಡಬೇಡಿ. ಅದೊಂದು

ರೀತಿ ಭಿಕ್ಷೆ ಕೊಟ್ಟಂತೆ ಆಯಿತು. ಇದು ಎಲ್ಲಾ ರೈತರಿಗೂ ಅನ್ವಯಿಸಬೇಕು. ಎಲ್ಲಾ ಬೆಳೆಗೂ ಅನ್ವಯಿಸಬೇಕು. ಇಲ್ಲದಿದ್ದರೆ ರಾಜ್ಯಸರ್ಕಾರ ಸುಮ್ಮನೆ ಮೂಗಿಗೆ ತುಪ್ಪ ಹಚ್ಚಿದಂತೆ ಆಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈ ರೀತಿ ಮಾಡುವುದಿದ್ದರೆ ಸದನದ ಸಮಿತಿಯು ಬೇಕಾಗಿರಲಿಲ್ಲ. ಸದನ ಸಮಿತಿಯವರಿಗೆ ವರದಿ ಕೊಡಿ ಎಂದು ಹೇಳಿ ವರದಿ ಕೊಡುವುದಕ್ಕೆ ಅವರು ಇಷ್ಟು ನಿಧಾನ ಮಾಡಿದರೂ ಕೊನೆಗೆ ಇದು ಅತ್ತು ಕರೆದು ಏನೊ ಔತಣ ಮಾಡಿಸಿ ಕೊಂಡಂತೆ ಆಗಿದೆ. ಇದು ಒಳ್ಳೆಯದಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಈಗ ನಾವು ಇನ್‌ಸಿಸ್ಟ್ ಮಾಡುವುದೇನು? ಸದನದ ಸಮಿತಿ ರಿಪೋರ್ಟಿನ ಪ್ರಕಾರ ಅವರು ತೊಗರಿಯ ಬಗ್ಗೆಯೂ ಹೇಳಿದ್ದಾರೆ. ಉದ್ದು, ಹೆಸರು ಬಗ್ಗೆಯೂ ಹೇಳಿದ್ದಾರೆ. ಅದೇ ರೀತಿಯಾಗಿ ಜೋಳದ ಬಗ್ಗೆಯೂ ಹೇಳಿದ್ದಾರೆ. ಅದು ಇಂಟಿರಮ್ ರಿಪೋರ್ಟ್‌ನಲ್ಲೇ ಕೊಟ್ಟಿದ್ದಾರೆ. ಅದನ್ನು ಅಟಲೀಸ್ಟ್ ಅದಕ್ಕೆ ಸೀಮಿತವಾಗಿಯಾದರೂ ಅವರು ಕೊಟ್ಟಂಥ ರಿಪೋರ್ಟಿನ ಮೇಲೆ ಇನ್ ಟೋಟೋ ಇಂಪ್ಲಿಮೆಂಟ್ ಮಾಡುತ್ತೇವೆ ಎಂದು ಹೇಳಬೇಕಲ್ಲವೇ?

ಶ್ರೀ ವಾಟಾಳ್‌ನಾಗರಾಜ್ : ಸದನ ಸಮಿತಿ ರಚನೆಯಾದ ಉದ್ದೇಶವೇನು?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೇಳಿದ್ದೇ 500 ರೂಪಯಿ ಮ್ಯಾಕ್ಸಿಮಮ್. ಅದಾಯಿತು. ಒಂದು ರೀತಿಯಿಂದ ನಾವು ಪರ್ ಹೆಕ್ಟೇರ್ 750 ರೂಪಾಯಿ ಮಾಡಿದ್ದೇವೆ. ಹಿಂದಕ್ಕೂ ಇಷ್ಟೇ ಆಗಿತ್ತು, ಎಂದರೆ ಹೇಗೆ? ಆಗ ಈ ಸದನ ಸಮಿತಿಯಾಗಿತ್ತೇ? ಇಷ್ಟು ಜನ ಆತ್ಮಹತ್ಯೆ ಮಾಡಿಕೊಂಡಿದ್ದರೇ? ಇಷ್ಟೊಂದು ಪ್ರಮಾಣದಲ್ಲಿ ಬೆಳೆ ಹಾನಿಯಾಗಿತ್ತೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) : ಆಗ ಹಾನಿ ಜಾಸ್ತಿಯಾಗಿತ್ತು. ರಿಪೋರ್ಟ್ ತರಿಸಿ. ಅವತ್ತು ಎಷ್ಟಾಗಿತ್ತು ಎಂದು ಗೊತ್ತಾಗುತ್ತದೆ. It is only input subsidy, not crop compensation.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಾನಿಯಾಗಿದ್ದರೆ ಅದಕ್ಕೆ ತಕ್ಕಂತೆ ಯಾರು ಕೇಳಿದ್ದರು ಆ ಸಮಯದಲ್ಲಿ ಪರಿಹಾರವನ್ನು ಅವರಿಗೆ, ಕೊಟ್ಟರು. ಈ ಸದನದಲ್ಲೂ ಕೂಡ ಅದರ ಬಗ್ಗೆ ಚರ್ಚೆಯಾಗಿಲ್ಲ. ಹೊರಗಡೆ ಕೂಡ ಯಾರು ಕೇಳಲಿಲ್ಲ. ಆದರೆ ನಾವೇ ಮನಗಂಡು ಹೋಗಿ ನೋಡಿ ಕೊಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಕರ್ನಾಟಕ ಇತಿಹಾಸದಲ್ಲಿ ಇಂಥ ಪರಿಸ್ಥಿತಿ ಆಗಿರಲಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಷ್ಟೊಂದು ಅನಾಹುತವಾಗಿದ್ದರೂ ನೀವೇ ರೈತರ ಹತ್ತಿರ ಹೋಗಿದ್ದರೇನು?

(ಗೊಂದಲ)

ಶ್ರೀ ಸಿ. ಭೈರೇಗೌಡ (ಕೃಷಿ ಸಚಿವರು) : ನಾವು ಹೋಗಿದ್ದೇವೆ. ನಾನು ಹೋಗಿರಲಿಲ್ಲವೇ? ಹೋಗಿ ಬಂದಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರಿಪೋರ್ಟ್ ಬಂದಮೇಲೆ ಇನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ನಾನು ಮೊನ್ನೆ ಎರಡನೇ ಸಲ ಹೋಗಿದ್ದೆ. ರಿಪೋರ್ಟ್ ಬಂದಿದ್ದರೂ ಒಂದು ಲಕ್ಷ ರೂ. ಕೊಡುವುದಕ್ಕೂ ಕೂಡ ಇನ್ನೂ ಡೆಪ್ಯುಟಿ ಕಮೀಷನರ್ ವೈಟ್ ಮಾಡುತ್ತಿದ್ದಾರೆ. ನಾನು ಏಕೆ ಹೇಳುತ್ತಿದ್ದೇನೆಂದರೆ ನೀವು ಇದಕ್ಕೆ ಕಾಳಜಿ ವಹಿಸಿ. ಆಗ ನೀವು ಇಷ್ಟುಕೊಟ್ಟಿದ್ದೀರಿ, ನಾನು ಈಗ ಅಷ್ಟೇ ಕೊಡುತ್ತೇನೆ ಎಂದರೆ ಸರಿಯಾಗುವುದಿಲ್ಲ. ಇವತ್ತಿನ ಸಂದರ್ಭಾನುಸಾರ ಹೌಸ್ ಕಮಿಟಿ ಹೋದಮೇಲೆ ಅಲ್ಲಿಯ ಪರಿಸ್ಥಿತಿಯನ್ನು ತಿಳಿದುಕೊಂಡೇ ಮಾಡಿದ್ದಾರೆ. ಅವರು ತಿಳಿಯದೇ ಇರುವುದನ್ನು ಏನೂ ಮಾಡಿಲ್ಲ.

7.10 ಪಿ.ಎಂ

ಅದಕ್ಕಾಗಿ ನಾನು ಹೇಳಬೇಕಾಗುತ್ತದೆ. ಅದೇನೆಂದರೆ ರೈತರಿಗೆ ಯಾವುದೇ ರೀತಿಯ ಸಹಾಯ ಅಲ್ಲ ಮತ್ತು ಯಾವ ರೀತಿಯಿಂದ ಮನಸ್ಸು ಇಟ್ಟು ಮಾಡಬೇಕಾಗಿತ್ತು. ಕೇಂದ್ರ ಸರ್ಕಾರದಿಂದ ಸಹಾಯ ಬರಲಿಲ್ಲ ಎಂದು ಹೇಳುವುದಿಲ್ಲ. ಕೇಂದ್ರ ಸರ್ಕಾರ ಕೊಡುವುದೇ ಇಲ್ಲ ಎಂದು ನಿಮಗೆ ಗೊತ್ತಿದೆ. ಆದರೂ ನೀವು ಅದರ ಹೆಸರು ಹೇಳುತ್ತೀರಿ, ಹೇಳಿಕೊಳ್ಳಿ. ಕೊಡಿಸುವವರು ಏನು ಕೊಡಿಸುತ್ತಾರೋ ನೋಡೋಣ. ಮಾನ್ಯ ಬಾಬಾಗೌಡರು ಎಷ್ಟು ಕೊಡಿಸುತ್ತಾರೋ ನೀವು ಏನು ತರುತ್ತೀರೋ, ಆ ಮಾತು ಬೇರೆ. ಯಾವ ಕಾಲದಲ್ಲೂ ಆಗಿಲ್ಲ, ಇದೊಂದು. ಇನ್ನೊಂದು ಇದ್ದ ದುಡ್ಡಿನಲ್ಲೇ ನಾವು ಕೊಡಬೇಕಾಗುತ್ತದೆ. ಇದ್ದ ದುಡ್ಡಿನಲ್ಲೇ ತಮಗೆ ಕೊಡುವುದಕ್ಕೆ ಮನಸ್ಸು ಇಲ್ಲ ಎಂದಾಗ ನಾವು ಹೇಳಬೇಕಾಗುತ್ತದೆ, ಖಂಡಿತವಾಗಿ ಇದರ ಬಗ್ಗೆ ತಾವು ಹೆಚ್ಚಿನ ಆಸಕ್ತಿ ವಹಿಸುತ್ತಿಲ್ಲ. ಏನೋ ಸ್ವಲ್ಪ ಸಹಾಯ ಮಾಡಬೇಕು ಎನ್ನತಕ್ಕ ದೃಷ್ಟಿಯಿಂದ ಇವತ್ತು ತಾವು 750 ರೂಪಾಯಿ ನಿಗದಿ ಮಾಡಿದ್ದೀರಿ. ಇದು ಖಂಡಿತ ಎಷ್ಟಕ್ಕೂ ಸಾಲದು. ಮತ್ತು ಈಗೇನು ಸತ್ತು ಹೋಗಿದ್ದಾರೆ, ಸುಸೈಡ್ ಮಾಡಿಕೊಂಡಿದ್ದಾರೆ, ಅವರಿಗೆ ಇನ್ನೂ ಹಣ ಮುಟ್ಟಿಲ್ಲ. ಈಗ ಕೊಡುತ್ತೇವೆ ಎನ್ನತಕ್ಕ ಮಾತನ್ನು ಹೇಳುತ್ತೀರಿ. ಅದಕ್ಕೆ ಏನು ಎಜಿಟೇಷನ್ ಮಾಡಬೇಕು, ಹೇಳಬೇಕು, ಕಮಿಟಿ ಆಗಬೇಕು, ಕ್ಯಾಬಿನೆಟ್ ನೋಡಬೇಕಾ?

ಶ್ರೀ ಸಿದ್ದರಾಮಯ್ಯ : ಕಮಿಟಿ ಇನ್ನೂ ಏಳು ಜನಕ್ಕೆ ಕೊಡಬೇಕೆಂದು ಹೇಳಿದ್ದಾರೆ. ಆ ಏಳು ಜನಕ್ಕೂ ಒಂದೊಂದು ಲಕ್ಷ ರೂಪಾಯಿಯನ್ನು ನಾವು ಕೊಡುತ್ತಿದ್ದೇವೆ. ಅದರ ಬಗ್ಗೆ ತಕರಾರು ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇನ್ನೂ ಜಾಸ್ತಿ ಇದ್ದಾರೆ.

(ಗೊಂದಲ)

ಉಪಾಧ್ಯಕ್ಷರು : ರಿಪೋರ್ಟ್ ಎಷ್ಟು ಜನಕ್ಕೆ ಬಂದಿದೆ ಅಷ್ಟು ಜನಕ್ಕೆ ಕೊಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರಿಪೋರ್ಟ್‌ನಲ್ಲಿ ಪರ್ ಹೋಲ್ಡಿಂಗ್‌ಗೆ ಕೊಡಬೇಕು ಎಂದು ಇದೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರಿಪೋರ್ಟ್‌ನಲ್ಲಿ 40 ಜನಕ್ಕೂ ಕೊಡಬೇಕು ಎಂದು ಇದೆ. ಇವೆಲ್ಲವನ್ನೂ ಕೂಡ ನೋಡಿದಾಗ ಅವರು ಕೊಡುವುದಕ್ಕೆ ತಯಾರು ಇಲ್ಲ, ಸಹಾಯ ಮಾಡುವುದಕ್ಕೆ ತಯಾರು ಇಲ್ಲ.

ಶ್ರೀ ಸಿ. ಬೈರೇಗೌಡ : ಈಗ ಭತ್ತನೆ ಆಗಿರುವವನೂ ಸೊಯಸೈಡ್ ಮಾಡಿ ಕೊಳ್ಳುತ್ತಾನೆ. ಅವನಿಗೂ ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದನ್ನು ನಾವು ಪ್ರತಿಭಟಿಸುತ್ತೇವೆ. ಏಕೆಂದರೆ ನಾವು ಏನು ಹೇಳಬೇಕು ? ಪದೇ ಪದೇ ಹೇಳಬೇಕು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಬೇರೆ ಅವರಿಗೆ ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಸಿ. ಬೈರೇಗೌಡ : ಸಮಿತಿ ತೀರ್ಮಾನದ ಪ್ರಕಾರ. ತೊಗರೀ ಬಿಟ್ಟ ಮೇಲೆ ಸತ್ತಿದ್ದಾನೆ. ಅವನಿಗೂ ಪರಿಹಾರ ಕೊಡಬೇಕೆಂದು ಸಮಿತಿ ತೀರ್ಮಾನ ಮಾಡಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಇಲ್ಲಿ ಪದೇ ಪದೆ ಧರಣಿ ಮಾಡುವುದು, ಸಮಯ ವೇಸ್ಟ್ ಮಾಡುವುದು. ಕಾಲಹರಣ ಮಾಡುತ್ತೇವೆಂದು ನೀವು ಹೇಳುವುದು. ಅದಕ್ಕಾಗಿ ಇದನ್ನು ಪ್ರೊಟೆಸ್ಟ್ ಮಾಡುತ್ತೇವೆ ಮತ್ತು ಕನಿಷ್ಟ ಪಕ್ಷ ನಾವು ಪ್ರೊಟೆಸ್ಟ್ ಮಾಡಿ ಹೊರಗೆ ಹೋದಮೇಲಾದರೂ ಮಾನ್ಯ ಮುಖ್ಯಮಂತ್ರಿಗಳು ಅನೌನ್ಸ್ ಮಾಡಲಿ. ಅವರಿಗೇ ಕ್ರೆಡಿಟ್ ಬರಲಿ. ಅದಕ್ಕಾಗಿ ನಾವು ವಾಕೌಟ್ ಮಾಡುತ್ತೇವೆ.

(ಕಾಂಗ್ರೆಸ್ ಪಕ್ಷದ ಸದಸ್ಯರು ವಿರೋಧ ಪಕ್ಷದ ನಾಯಕರೊಂದಿಗೆ ಸಭಾತ್ಯಾಗ ಮಾಡಿದರು)

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೆ, ಒಂದು ರೀತಿಯ ಆತ್ಮಹತ್ಯೆ ಈ ಸರ್ಕಾರದ ಕೊಡುಗೆ ಏನೋ ಎಂಬ ರೂಪ ಬಂದು ಹೋಗಿದೆ. ಕೇಂದ್ರಕ್ಕೆ ನಾವು ಕರೆದುಕೊಂಡು ಹೋಗಲು ತಯಾರಿದ್ದೇವೆ, ಇಲ್ಲ ಎಂದು ಹೇಳಲಿಲ್ಲ. ಮತ್ತು ಕೊಡಿಸುವ ವಿಶ್ವಾಸದಲ್ಲೂ ಇದ್ದೇವೆ, ಸಿಗುತ್ತದೆ. ಅದರಲ್ಲಿ ಏನೂ ಎರಡು ಮಾತಿಲ್ಲ. ಮಾರ್ಜಿನಲ್ ಫಾರ್ಮರ್ಸ್‌ಗೆ, ಸ್ಮಾಲ್ ಫಾರ್ಮರ್ಸ್‌ಗೆ

ಪರಿಹಾರ ಬರುತ್ತದೆ ಎಂಬ ವಿಶ್ವಾಸದಲ್ಲಿ ನಾವು ಇದ್ದೇವೆ, ಇದರಲ್ಲಿ ರಾಜಕೀಯ ಪ್ರಶ್ನೆ ಇಲ್ಲ. ಆದರೆ ಈಗ ಪ್ರಶ್ನೆ ಇರುವುದು ಎಂದರೆ ನೀವು ತೊಗರಿಗೆ ಕೊಡುತ್ತೀರಿ. ಪಕ್ಕದಲ್ಲಿರುವ ರೈತ ನೋಡಿಕೊಂಡು ಇರಬೇಕಾ ? ಹಾಗಾದರೆ ಅವನ ಕಥೆ ಏನು ? ಜೋಳ ಕಳೆದುಕೊಂಡವನು, ಉದ್ದು ಕಳೆದುಕೊಂಡವನು.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ನಮ್ಮಲ್ಲಿ ಭತ್ತಕ್ಕೆ ಬೆಂಕಿ ರೋಗ ಬಂದು, ಹತ್ತತ್ತು ಎಕರೆಗೂ ಒಂದು ಕಾಳು ಸಹ ಬಂದಿಲ್ಲ. ದಾವಣಗೆರೆ ಹತ್ತಿರ ಕಾಕೆ ಜೋಳ ಹಾಕಿದವರದ್ದು ಸುಟ್ಟು ಹೋಗಿದೆ. ನೆಲಗಡಲೆ ಕೆಲವು ಏರಿಯಾದಲ್ಲಿ ಬಂದಿಲ್ಲ. ಧಾರವಾಡ ಜಿಲ್ಲೆಯಲ್ಲಿ ಕಾಕೆ ಜೋಳ ಸುಟ್ಟು ಹೋಗಿದೆ. ಅದಕ್ಕೆ ನಾವು ಈ ಸಾರಿ ಸದನದಲ್ಲಿ ತೊಗರಿ ಬೇಳೆಯಿಂದ ಎಂದು ಹೇಳಿದ್ದೇವೆ. ರೈತರಿಗೆ ಯಾವುದೇ ಕಾರಣದಿಂದ ಅವರಿಗೆ ಫಸಲು ಲಾಸ್ ಆದರೆ ಈ ಲಾಸನ್ನು ಭರ್ತಿ ಮಾಡಿಕೊಡಬೇಕೆಂದು even Government of America is not capable of doing. Do you know what they do,.... ಇನ್‌ಷ್ಯೂರ್ ಮಾಡಿಸಿದ್ದರೆ ಫುಲ್ ಕಾಂಪನ್ಸೇಷನ್ ಕೊಡುತ್ತಾರೆ. ಕ್ರಾಪ್ ಇನ್‌ಶ್ಯೂರೆನ್ಸ್ ಸ್ಕೀಮ್ ನಮ್ಮಲ್ಲಿಲ್ಲ. ಅಲ್ಲಿಗೂ ಏನಾದರೂ ಡಿಸ್ಪೈಸ್ ಸೇಲ್ ಬರುವ ಹಾಗೆ ಇದ್ದರೆ I can go to a Government Depot., put my produce there and take 50% of the market rate and sell whenever I like.. ಆ ಫೆಸಿಲಿಟೀಸ್ ಆ ರಾಷ್ಟ್ರಗಳಲ್ಲಿದೆ. ಇಲ್ಲಿಯವರೆಗೂ ತಾವು ನೋಡಿದ್ದೀರಿ. ಈಗ ತಕ್ಷಣ ಈ ಸಮಸ್ಯೆ ಬಂತಲ್ಲಾ ಒಂದು ಹೇಳಿ ನಾವೇ ಸದನ ಸಮಿತಿಗೆ ಒಪ್ಪಿಕೊಂಡು ಇದೆಲ್ಲಾ ನೋಡಿ ಅದರ ಸ್ಥಿತಿಗತಿಗಳನ್ನೆಲ್ಲಾ ನೋಡಿಕೊಂಡು, ರಾಜ್ಯದಲ್ಲಿರತಕ್ಕ ಬೇರೆ ಬೇರೆ ಜಿಲ್ಲೆಗಳಿಂದ ಬಂದಿರತಕ್ಕ ರಿಪೋರ್ಟ್‌ಗಳನ್ನು ನೋಡಿ, ಇದಕ್ಕೇನೇ ಮಾನ್ಯ ಹಣಕಾಸಿನ ಮಂತ್ರಿಗಳು 15 ಕೋಟಿ ರೂಪಾಯಿ ಜೋಡಿಸುವುದಕ್ಕೆ ಸಾಕಾಯಿತು.15-20 ಕೋಟಿ ರೂಪಾಯಿ ಜೋಡಿಸುವುದಕ್ಕೆನೇ ಬಹಳ ಕಷ್ಟ ಆಗುತ್ತದೆ. ಅದನ್ನು ಒಪ್ಪುವುದಿಲ್ಲ ಎಂದು ಹೇಳವುದಲ್ಲ. ಅವರು ಹೊರಗೆ ಹೋದ ಮೇಲೆ ಅನೌನ್ಸ್ ಮಾಡಬೇಕು ಎಂದು ಅವರೇನು ಹೇಳಿದ್ದಾರೆ, ದೇವರು ಅವರಿಗೆ ಒಳ್ಳೆಯದು ಮಾಡಲಿ ಎಂದು ನಾನು ಅನೌನ್ಸ್ ಮಾಡುತ್ತೇನೆ ಅಷ್ಟೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಅವರು ಈ ರೀತಿ ಮಾಡಿದೆ ಹಾಳಾಗಿ ಹೋದರು. ನೀವು ಹಾಗೆ ಆಗಬೇಡಿ ಎಂದು ನಮ್ಮ ಆಸೆ. ನಮ್ಮ ಜವಾಬ್ದಾರಿಯನ್ನು ಅರಿತುಕೊಂಡು ಕೇಂದ್ರ ಸರ್ಕಾರದಿಂದ ಏನು ಮಾಡಬೇಕೋ ಅದನ್ನು ಮಾಡೋಣ. ನಾನು ಹೇಳುತ್ತಿರುವುದು ಬೇರೆ. ಇಡೀ ರಾಜ್ಯದಲ್ಲಿ ಕೆಲವು ಕಡೆ ರೈತರಿಗೆ ಕೊಟ್ಟು, ಕೆಲವು ಕಡೆ ಕೊಡದಿರುವುದು ಸರಿಯಲ್ಲ. ಕೆಲವು ಕೆಲವು ಬೆಳೆಗೆ ಕೊಡುತ್ತೀರಿ, ಇನ್ನು ಕೆಲವು ಕಡೆ, ಕೆಲವು ಬೆಳೆಗೆ ಕೊಡುವುದಿಲ್ಲ ಎಂದು ಹೇಳುವುದು ಸರಿಯಲ್ಲ. ನಮ್ಮ ಒತ್ತಾಯ ಏನೆಂದರೆ ಎಲ್ಲಾ ಬೆಳೆಗಳಿಗೂ ಕೊಡಬೇಕು. ಎಲ್ಲಾ ರೈತರಿಗೂ500 ರೂಪಾಯಿಯಷ್ಟು ಕೊಡಲೇಬೇಕು. ಈ ದಿಕ್ಕಿನಲ್ಲಿ ಮಾಡಬೇಕು. ಕನಿಷ್ಟ 15 ದಿನದಲ್ಲಿ ಆದರೂ ಇದು ಆಗಲೇ ಬೇಕು ಎಂದು ಒತ್ತಾಯ ಮಾಡುತ್ತೇವೆ. ಸರ್ಕಾರದ ಈ ಧೋರಣೆಯನ್ನು ಪ್ರತಿಭಟನೆ ಮಾಡಿ ನಾವು ಸಭಾ ತ್ಯಾಗ ಮಾಡುತ್ತೇವೆ.

(ಬಿಜೆಪಿ ಪಕ್ಷದ ಶಾಸಕರು ಸಭಾತ್ಯಾಗ ಮಾಡಿದರು)

ಶ್ರೀ ಸಿ. ಬೈರೇಗೌಡ : ಕೇಂದ್ರ ಸರ್ಕಾರದಿಂದ ಸಹಾಯ ತರಿಸಿ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಸದನ ಸಮಿತಿಯ ಸಂಪೂರ್ಣ ವರದಿಯನ್ನು ಒಪ್ಪಬೇಕೆಂದು ಹೇಳಿ ನಾನು ಸಭಾ ತ್ಯಾಗ ಮಾಡುತ್ತಿದ್ದೇನೆ.

(ಕನ್ನಡ ಚಳುವಳಿ ಪಕ್ಷದ ಮಾನ್ಯ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು : ಈಗ ಸದನವನ್ನು ಮುಂದೂಡುತ್ತಿದ್ದೇನೆ. ಶುಕ್ರವಾರ 10.00 ಗಂಟೆಗೆ ಸಭೆ ಪುನಃ ಸಮಾವೇಶಗೊಳ್ಳುತ್ತದೆ.

(ಸದನವು ಸಂಜೆ 7.15ಕ್ಕೆ ಮುಕ್ತಾಯವಾಗಿ ಮತ್ತೆ ಶುಕ್ರವಾರ 8.5.98ರಂದು ಬೆಳಿಗ್ಗೆ 10.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

+ ಈ ಚಿಹ್ನೆಯನ್ನು ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.